# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 33/16-17

ದಿನಾಂಕ : 25-10-2016.

ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಶ್ರೀ ಕೇಶವ<br>ಬಿನ್ ಪೂವಪ್ಪ ಪೂಜಾರಿ<br>ಬಿಲ್ಲಂತಡ್ಕ ಮನೆ<br>ಕೊಳ್ತಿಗೆ ಗ್ರಾಮ, ಪುತ್ತೂರು ತಾಲೂಕು.<br>ನ್ಯಾಯವಾದಿ: ಶ್ರೀ ಮನೋಹರ್ ಎ | ಮತ್ತು | ತಹಶೀಲ್ದಾರರು.<br>ಪುತ್ತೂರು ತಾಲೂಕು ದ.ಕ. |

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಕಾಯಿದೆ 1964 ರ ನಿಯಮ 136 ರನ್ವಯ ನಿಯಮ 25 ನ್ನು ಓದುವುದರೊಂದಿಗೆ ಪುತ್ತೂರು ತಾಲೂಕು ಕೊಳ್ತಿಗೆ ಗ್ರಾಮದ ಆರ್ ಆರ್ ಟಿ ಸಿ ಆರ್ : 309/15-16 ದಿನಾಂಕ :09/03/2016 ರ ಪುತ್ತೂರು ತಾಲೂಕು ತಹಶೀಲ್ದರರ ಹಿಂಬರಹವನ್ನು ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಮೇಲ್ಮನವಿಯಲ್ಲಿ ಶ್ರೀಮತಿ ಗಿರಿಜಾ ಕೋಂ ದಿ. ರಾಮಣ್ಣ ಪೂಜಾರಿ , ಬಿಲ್ಲಂತಡ್ಕ ಮನೆ , ಕೊಳ್ತಿಗೆ ಗ್ರಾಮ ಇವರು ಮತ್ತು ತಾನು ಹಿಂದೂ ಅವಿಭಜಿತ ಕುಟುಂಬದಲ್ಲಿ ಉತ್ತರಾಧಿಕಾರಿ ದಾಯಿತ್ವದಲ್ಲಿ ನಡೆದುಕೊಂಡು ಬರುವವರಾಗಿರುತ್ತೇವೆ. ಪುತ್ತೂರು ತಾಲೂಕು ಕೊಳ್ತಿಗೆ ಗ್ರಾಮದ ಸ.ನಂ. 386/2ಪಿ2 ರ 1.38ಎಕ್ರೆ ಮತ್ತು ಸ.ನಂ;330/1ಪಿ2 ರ 0.67 ಎಕ್ರೆ ಹಾಗೂ 386/2ಪಿ2 ರ 0.15 ಎಕ್ರೆ ಕೃಷಿಯೇತರ ಜಮೀನಾಗಿ ಪರಿವರ್ತಿಸಲ್ಪಟ್ಟ ಜಮೀನು ಮೇಲ್ಮನವಿದಾರರು ಅಜ್ಜ ರಾಮಣ್ಣ ಪೂಜಾರಿಯವರ ಕಾನೂನು ಬದ್ಧ ಅನುಭವ ಮತ್ತು ಸ್ವಾಧೀನತೆಯಲ್ಲಿದ್ದು ಸದ್ರಿ ಜಮೀನನ್ನು ಮೇಲ್ಮನವಿದಾರರು ಅಜ್ಜ ಎನ್ ಸಿ ಆರ್ ಸಿ ಆರ್ 271/91-92 ರಂತೆ ಮಂಜೂರಾತಿಯಿಂದ ಪಡೆದ ಜಮೀನಾಗಿರುತ್ತದೆ.

ಶ್ರೀ ರಾಮಣ್ಣ ಪೂಜಾರಿಯವರು ದಿ: 20/11/2005 ರಂದು ಪತ್ನಿ ಮತ್ತು ಮೇಲ್ಮನವಿದಾರರನ್ನು ಅಗಲಿರುತ್ತಾರೆ. ಇದರಿಂದ ಪತ್ನಿ ಶ್ರೀಮತ್ತಿ ಗಿರಿಜಾರವರು ಮೃತರ ಎಲ್ಲಾ ಜಮೀನಿನ ಉತ್ತರಾಧಿಕಾರಿಯಾಗಿರುತ್ತಾರೆ. ದಿ. ರಾಮಣ್ಣ ಪುಜಾರಿಯವರು ಅವರ ಜೀವಿತಾವಧಿಯಲ್ಲಿ ದಿ : 23/12/1995 ರಂದು ತನ್ನ ಎಲ್ಲಾ ಸ್ತಿರ ಮತ್ತು ಚರ ಆಸ್ತಿಗಳನ್ನು ಹಾಗೂ ತನ್ನ ಸ್ವಾಧೀನವಿದ್ದ ಜಮೀನುಗಳನ್ನು ಅವರ ಪತ್ನಿ ಗಿರಿಜಾ ಮತ್ತು ಮೇಲ್ಮನವಿದಾರರಿಗೆ ಸಮಾನವಾಗಿ ಹಂಚಿ ವೀಲುನಾಮೆಯೊಂದನ್ನು , ಮಾಡಿರುವುದಾಗಿದೆ. ಅದರಂತೆ ಜಮೀನು ಅವರಿಬ್ಬರ ಹೆಸರಿಗೆ ಜಂಟಿಯಾಗಿ ಬಂದಿರುವುದಾಗಿದೆ. ಹೀಗಿರುವಲ್ಲಿ, ಮೇಲ್ಮನವಿದಾರರು ಸದ್ರಿ ಜಮೀನಿನ ವಿಭಾಗಕ್ಕಾಗಿ ಪುತ್ತೂರು ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ ಎಂ ಎಫ್ ಸಿ ಇವರ ನ್ಯಾಯಾಲಯದಲ್ಲಿ ಮೂಲದಾವೆ ಸಂ: 712/15 ನ್ನು ದಾಖಲಿಸಿರುವುದಾಗಿದೆ. ಸದ್ರಿ ದಾವೆಯು ಎರಡೂ ಪಾರ್ಟಿಗಳ ರಾಜಿ ತೀರ್ಮಾನದಂತೆ ರಾಜಿ ಡಿಕ್ರಿಯಾಗಿದ್ದು ದಿ: 29/01/2016 ರಂದು ಅಂತಿಮ ಡಿಕ್ರಿಯಾಗಿರುತ್ತದೆ,. ಸದ್ರಿ ರಾಜಿ ಡಿಕ್ರಿಯಂತೆ ಸ.ನಂ: 386/2ಪಿ2 ರ 1.38 ಎಕ್ರೆ ಮತ್ತು ಸ.ನಂ: 330/1ಪಿ2 ರ 0.67 ಎಕ್ರೆ ಹಾಗೂ 386/2ಪಿ2 ರ 0.15 ಎಕ್ರೆ ಕೊಳ್ತಿಗೆ ಗ್ರಾಮಕ್ಕೆ ಸಂಬಂಧಿಸಿದಂತೆ ಮೇಲ್ಮನವಿದಾರರು ಹಿಶೆಗೆ ವಿಂಗಡಿಸಲ್ಪಟ್ಟಿದೆ. ಅದರಂತೆ ಮೇಲ್ಮನವಿದಾರರು ಪುತ್ತೂರು ತಾಲೂಕು ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿ ಜಮೀನಿನ ಖಾತೆ ವರ್ಗಾವಣೆಗೆ ಕೋರಿರುತ್ತಾರೆ. ಆದರೆ ತಹಶೀಲ್ದಾರರು ಪ್ರಶ್ನಿತ

ಹಿಂಬರಹವನ್ನು ನೀಡುವ ಮೂಲಕ ಮ್ಯುಟೇಶನ್ ನಡವಳಿ ನಡೆಸದೇ ಇರುವುದರಿಂದ ಈ ಮೇಲ್ಮನವಿಯನ್ನು ಸಲ್ಲಿಸಲಾಗಿದೆ. ಅದರಂತೆ ಮೇಲ್ಮನವಿಯನ್ನು ಪುರಸ್ಕರಿಸಿ ನ್ಯಾಯಾಲಯದ ಅಂತಿಮ ಡಿಕ್ರಿಯಂತೆ ಖಾತೆ ಬದಲಾವಣೆ ಮಾಡಲು ಪ್ರತಿವಾದಿಗೆ ಆದೇಶ ನೀಡಬೇಕೆಂದು ಮೇಲ್ಮನವಿಯಲ್ಲಿ ಕೋರಿರುತ್ತಾರೆ.

ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಅಂಗೀಕರಿಸಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ನೋಟೀಸು ಮಾಡಿ ದಿನಾಂಕ : 22/06/2016 ರಂದು ಪ್ರಕರಣವನ್ನು ವಿಚಾರಣೆ ನಡೆಸಿ ವಾದಿ ಪ್ರತಿವಾದಿಗಳಿಗೆ ಯುಕ್ತ ಅವಕಾಶಗಳನ್ನು ನೀಡಿ ಪ್ರಕರಣವನ್ನು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯದಲ್ಲಿ ಪ್ರತಿವಾದಿಯವರು ವಿಚಾರಣೆಗೆ ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯಲ್ಲಿ ಕಾಣಿಸಿದ ಅಂಶವನ್ನೇ ಪುನರುಚ್ಚರಿಸಿ, ಅದರಂತೆ ಕ್ರಮ ಕೈಗೊಳ್ಳಲು ಕೋರಿ ವಾದ ಮಂಡಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದ ಪ್ರತಿವಾದಿಗಳ ಹಿಂಬರಹ ಸಂಖ್ಯೆ ಆರ್ ಆರ್ ಟಿ ಸಿ ಆರ್: 309/15-16 ದಿ: 09/03/2016 ರಂದು ಪರಿಶೀಲಿಸಲಾಗಿದೆ. ಸದ್ರಿ ಹಿಂಬರಹದಲ್ಲಿ ಜಮೀನಿನ ಖಾತೆ ವರ್ಗಾವಣೆಗೆ ನ್ಯಾಯಾಲಯದ ಅಂತಿಮ ಡಿಕ್ರಿಯನ್ನು ಸಂಬಂಧಪಟ್ಟ 11 ಇ ನಕ್ಷೆ ಸಹಿತ ನೋಂದಾಯಿತವಾಗಿರುವುದಿಲ್ಲ. ನೋಂದಾವಣೆಯಾಗದ ದಾಖಲೆಯಂತೆ ಭೂಮಿ-ಕಾವೇರಿ ತಂತ್ರಾಂಶದ ಮೂಲಕ ಸ್ವೀಕರಿಸಿ ದಾಖಲಿಸಲು ರಹ ಇರುವುದಿಲ್ಲ ಎಂದು ತಿಳಿಸಲಾಗಿದೆ.

ಸರ್ಕಾರದ ಸುತ್ತೋಲೆ ಸಂ: ಆರ್ ಡಿ 11 ಟಿ ಆರ್ ಎಂ :2008 ದಿ: 03/02/2010 ರಂತೆ ಯಾವುದೇ ಸಿವಿಲ್ ನ್ಯಾಯಲಯದ ಡಿಕ್ರಿ ಅಥವಾ ಅಂತಿಮ ಆದೇಶವು ನೋಂದಾವಣೆಯಾಗ ಬೇಕಾಗಿದೆ. ಪ್ರಕರಣದಲ್ಲಿ ಮೇಲ್ಮನವಿದಾರರು ಸಲ್ಲಿಸಿದ ಸ.ನಂ: 386/2ಪಿ2 ರ ಪಹಣಿಯಲ್ಲಿ 1.63 ಎಕ್ರೆ ಜಮೀನಿದ್ದು, ಸದ್ರಿ ಜಮೀನಿನ ಪೈಕಿ 1.38 ಎಕ್ರೆ ಶ್ರೀಮತಿ ಗಿರಿಜಾರವರ ಹೆಸರಿನಲ್ಲಿ ಕೃಷಿ ಜಮೀನಾಗಿಯೂ 0.15 ಎಕ್ರೆ ಕೃಷಿಯೇತರ ಜಮೀನಾಗಿಯೂ ದಾಖಲಿದ್ದು 0.10 ಎಕ್ರೆ ಸುರೇಶ ಬಿನ್ ಚನಿಯಪ್ಪ ಪೂಜಾರಿ ರವರ ಹೆಸರಿನಲ್ಲಿ ಕೃಷಿಯೇತರ ಜಮೀನಾಗಿ ದಾಖಲಿಸಲ್ಪಟ್ಟಿದೆ. ರಾಮಣ್ಣ ಪೂಜಾರಿ ಯವರಿಗೆ ಅಕ್ರಮ ಸಕ್ರಮದಲ್ಲಿ ಮಂಜೂರಾಗಿರುವುದಾಗಿ ಹೇಳಿದ ಜಮೀನು ಸುರೇಶರವರಿಗೆ ಯಾವ ಆಧಾರದಲ್ಲಿ ಭೂಪರಿವರ್ತಿಸಲ್ಪಟ್ಟಿದೆ ಮತ್ತು ಶ್ರೀಮತಿ ಗಿರಿಜಾ ಹಾಗೂ ಕೇಶವರವರಿಗೆ ಸಮಾನವಾಗಿ ವೀಲುನಾಮೆ ಮಾಡಲ್ಪಟ್ಟ ಜಮೀನು ಮಾರಾಟ ಮಾಡಿದವರು ಯಾರು? ಅಕ್ರಮ ಸಕ್ರಮ ಜಮೀನು ಯಾವಾಗ ಮಂಜೂರಾಗಿದೆ? ಮಂಜೂರಾಗಿ ದುರಸ್ತಿಯಾಗದೇ 0.25 ಎಕ್ರೆ ಹೇಗೆ ಭೂಪರಿವರ್ತಿಸಲ್ಪಟ್ಟಿದೆ? ಎಂಬಿತ್ಯಾದಿ ಮಾಹಿತಿಗಳು ಈ ಪ್ರಕರಣದಲ್ಲಿ ನಿಗೂಢವಾಗಿದೆ. ಪ್ರಕರಣದಲ್ಲಿ ಸ.ನಂ: 330/1ಪಿ2 ರಲ್ಲಿ 0.67 ಎಕ್ರೆ ಜಮೀನು ಸಹ ಪ್ಲಾಟಿಂಗ್ ಆಗಿ ದುರಸ್ತಿಯಾಗಿರುವುದು ಕಂಡುಬರುವುದಿಲ್ಲ. ಪ್ಲಾಟಿಂಗ್ ಆಗಿ ದುರಸ್ತಿಯಾಗದೇ ವಿಭಾಗ ಪತ್ರ/ ನ್ಯಾಯಾಲಯದ ಡಿಕ್ರಿಗಳನ್ನು ನಕ್ಷೆಯೊಂದಿಗೆ ನೋಂದಾಯಿಸಿಕೊಳ್ಳದೆ ಖಾತೆ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಆದ್ದರಿಂದ ಮೇಲ್ಮನವಿದಾರರು ಮೇಲ್ಮನವಿಯನ್ನು ಪರಿಗಣಿಸುವುದು ನೋಂದಾಯಿತವಲ್ಲದ ದಾಸ್ತಾವೇಜಿನಂತೆ ರಹ ಇಲ್ಲದ ಕಾರಣ ಪ್ರತಿವಾದಿಗಳ ಹಿಂಬರಹವನ್ನು ಊರ್ಜಿತವಿರಿಸುವುದು ಸರಿಯೆಂದು ಪರಿಗಣಿಸಿ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ.

ಮೇಲ್ಮನವಿಯನ್ನು ತಿರಸ್ಕರಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ :25- 10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್
ಸಹಾಯಕ ಆಯುಕ್ತರು,
ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಮನೋಹರ್ ಎ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.